ಇದೆ. ಈ ರಸ್ತೆಯಲ್ಲಿ ಎತ್ತಿನ ಗಾಡಿ ಸಹ ಹೋಗುವುದಕ್ಕೆ ಆಗಂವುದಿಲ್ಲ. ಇದನ್ನು ಮಾನ್ಯ ಮಂತ್ರಿಗಳು ನೋಡಿದ್ದಾರೆ. ಅದನ್ನು ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಎಂದೂ ಹೇಳಿ ಸೇರಿಸಿದ್ದಾರೋ, ಇದರ ವ್ಯಾಪ್ತಿಯಲ್ಲೇ ಸರ್ಕಾರದ ವತಿಯಿಂದ ಈ ಒಂದು ರೋಡಿಗಾದರೂ ಇವರ ಆಲಾಪೆಯಿಂದ ರಿಪೇರಿ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.— ಅಧ್ಯಕ್ಷರೇ ಅದು ಈಗ ಜಿಲ್ಲಾಪರಿಷತ್ ರಸ್ತೆಯಾಗಿದೆ. ಅದನ್ನು ಮೇಲ್ದರ್ಜೆಗೆ ಏರಿಸಿ, ಲೋಕೋಪಯೋಗಿ ರಸ್ತೆಯಾಗಿ ಮಾಡುವಂತಹ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆ. ಇದು ಮಂಜೂರಾತಿ ಆದನಂತರ, ಮಾನ್ಯ ಸದಸ್ಯರು ಕೊಟ್ಟ ಸಲಹೆಯನ್ನು ನಾವು ಪರಿಶೀಲಿಸುತ್ತೇವೆ.

ಕುಂದಾಪುರ ಕ್ಷೇತ್ರದ ಕಸಬಾ ಕೋಡಿ ಕಡಲ್ಕೊರೆತದ ಬಗ್ಗೆ ತಡೆಗೋಡೆ ರಚನೆ

೧೦೪೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕುಂದಾಪುರ ಕ್ಷೇತ್ರದ ಕೋಡಿಯ ಕಡಲ್ಕೊರೆತಕ್ಕೆ ತಡೆಗೋಡೆ ರಚಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು;

ಆ) ತಡೆಗೋಡೆ ರಚಿಸುವುದರಲ್ಲಿ, ಈ ಕಾಮಗಾರಿಯು ಯಾವಾಗ ಪ್ರಾರಂಭಗೊಳ್ಳುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು)—

ಅ) ಕುಂದಾಪುರ ತಾಲ್ಲೂಕು ಕಸಬಾ ಕೋಡಿಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು ತಡೆಗೋಡೆ ನಿರ್ಮಾಣದ ಎರಡು ಕಾಮಗಾರಿಗಳಿಗೆ ೧೯೯೦–೯೧ನೇ ಬಜೆಟ್‌ನಲ್ಲಿ ಅವಕಾಶ ಮಾಡಲಾಗಿದೆ.

೧) ಮೊದಲನೇ ಕಾಮಗಾರಿಗೆ ಬಜೆಟ್ ಅಂದಾಜು ರೂ. ೧೦ ಲಕ್ಷಗಳಿದ್ದು ಬಜೆಟ್ ಅನುದಾನವು ರೂ. ೩.೫೫ ಲಕ್ಷಗಳಿರುತ್ತದೆ. ಸುಮಾರು ೧೨೦ ಮೀ. ಉದ್ದ ತಡೆಗೋಡೆ ನಿರ್ಮಿಸುವ ಸದರಿ ಕಾಮಗಾರಿಗಾಗಿ ಅಂದಾಜು ತಯಾರಿಸಲಾಗುತ್ತಿದೆ.

೨) ಎರಡನೇ ಕಾಮಗಾರಿಗೆ ಬಜೆಟ್ ಅಂದಾಜು ರೂ. ೧೦ ಲಕ್ಷಗಳಿದ್ದು ಬಜೆಟ್ ಅನುದಾನ ರೂ. ೨೫ ಸಾವಿರಗಳಿರುತ್ತದೆ.

ಆ) ಮೊದಲ ಕಾಮಗಾರಿಯನ್ನು ಬೀಚ್ ತಯಾರಾದಲ್ಲಿ ೧೯೯೦–೯೧ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಎರಡನೇ ಕಾಮಗಾರಿಯ ಅಂದಾಜು ತಯಾರಾಗಬೇಕಾಗಿದ್ದು ಅಂದಾಜು ತಯಾರಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಕುಂದಾಪುರ ಕ್ಷೇತ್ರದ ಕೋಡಿಯಲ್ಲಿ ಸಮುದ್ರ ಕೊರೆತಕ್ಕೆ ತಡೆಗೋಡೆ ರಚಿಸುವ ಬಗ್ಗೆ ಹಾಗೂ ಸರ್ಕಾರದ ಅನುದಾನದ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಈ ತಡೆಗೋಡೆ ಕಟ್ಟಬೇಕಾದರೆ, ಒಂದು ತಾತ್ಕಾಲಿಕ ತಡೆಗೋಡೆ, ಇನ್ನೊಂದು ಶಾಶ್ವತ ತಡೆಗೋಡೆಯ ಅವಶ್ಯಕತೆ ಇದೆ. ತಾತ್ಕಾಲಿಕ ತಡೆಗೋಡೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಮತ್ತು ಮೊದಲನೇ ಮತ್ತು ಎರಡನೇ ಕಾಮಗಾರಿಗಳ ಬಗ್ಗೆ. ಒಂದಕ್ಕೆ ೩.೫೫ ಲಕ್ಷ ಮತ್ತೊಂದಕ್ಕೆ ಕೇವಲ ೨೫ ಸಾವಿರ ಅನುದಾನವನ್ನು ತಾವು ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿದ್ದೀರಿ. ಈ ಕೆಲಸಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಮತ್ತೆ ಇದಕ್ಕೆ ಕೇವಲ ೨೫ ಸಾವಿರ ರೂಪಾಯಿಗಳು ಇರುವುದರಿಂದ, ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಈ ಸಮುದ್ರ ಕೊರೆತದಿಂದ ದಿನಬೆಳಗಾದರೆ, ಮನೆಗಳು, ರಸ್ತೆಗಳು, ತೆಂಗಿನ ಮರಗಳು ಕೊಚ್ಚಿ ಹೋಗುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಇದು ಹೆಚ್ಚಾಗಿ ಆಗುತ್ತಿದೆ. ಇದಕ್ಕೆ ತಕ್ಷಣ ತಾವು ಯಾವ ಪರಿಹಾರವನ್ನು ಕೊಡುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಕಸಬಾ ಕೋಡಿಯಲ್ಲಿ ತಾತ್ಕಾಲಿಕ ತಡೆಗೋಡೆ ನಿರ್ಮಾಣ ಮಾಡುವುದಕ್ಕೆ ಅಂದಾಜು ೧೦ ಲಕ್ಷ ಬೇಕಾಗಿರುತ್ತದೆ. ನಮ್ಮ ಆಯವ್ಯಯದಲ್ಲಿ ೩.೫೫ ಲಕ್ಷ ಅನುದಾನವನ್ನು ಇಟ್ಟು, ಮಂಜೂರಾತಿ ಮಾಡುತ್ತಿದ್ದೇವೆ. ಶ್ರೀಘ್ರದಲ್ಲಿಯೇ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ತಮ್ಮ ಮುಂದೆ ತಿಳಿಸಬಯಸುತ್ತೇನೆ.

ಎರಡನೆಯಂ ಕಾವಂಗಾರಿಗೆ ೧೦ ಲಕ್ಷ ರೂಪಾಯಿ ಅಂದಾಜಿದ್ದು, ನಾವು ಒದಗಿಸಿರತಕ್ಕಂಥ ಹಣ ೨೫ ಸಾವಿರ ರೂಪಾಯಿಗಳು. ಈಗ ಆಡಳಿತಾತ್ಮಕವಾದ ಮಂಜೂರಾತಿಯನ್ನು ಕೊಡುವುದು ಸ್ವಲ್ಪ ಕಷ್ಟವಾಗಿದೆ. ಈ ಕೆಲಸ ಬಹಳ ಪ್ರಾಮುಖ್ಯವಾದುದು ಎಂಬುದನ್ನು ಮನಗಂಡಿದ್ದೇವೆ. ಈಗಾಗಲೇ ಆರ್ಥಿಕ ಇಲಾಖೆಗೆ ಇದರ ಬಗ್ಗೆ ನಾವು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಹಣವನ್ನು ಹೆಚ್ಚು ಕೊಡುವುದಕ್ಕೆ ನಾವು ವಿನಂತಿಸಿದ್ದೇವೆ. ಅವರು ಹಣವನ್ನು ಒದಗಿಸಿದ ತಕ್ಷಣ ಈ ಕೆಲಸವನ್ನು ಕೈಗೆತ್ತಿಕೊಳ್ಳತಕ್ಕಂಥ ಕಾರ್ಯವನ್ನು ನಾವು ಮಾಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಇಲ್ಲಿ ಮುಖ್ಯವಾಗಿ ಮೊದಲನೆಯಂ ಕಾಮಗಾರಿಗೆ ೧೦ ಲಕ್ಷ ಇಟ್ಟಿದ್ದೀರಿ. ಮತ್ತೊಂದಕ್ಕೂ ೧೦ ಲಕ್ಷ ಇಟ್ಟಿದ್ದೀರಿ. ಈ ೧೦ ಲಕ್ಷ ಹಣವನ್ನು ಮೂರು ವರ್ಷಗಳವರೆಗೆ ಖರ್ಚು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ತಾವು ಏನು ಹಣ ಇಟ್ಟಿದ್ದೀರಿ ಅದನ್ನು ಅದೇ ವರ್ಷ ಖರ್ಚು ಮಾಡಿದರೆ, ತಡೆಗೋಡೆ ನಿರ್ಮಿಸುವುದಕ್ಕೆ ಸಾಧ್ಯವಾಗುತ್ತದೆ ಆ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಮತ್ತು ಈ ಸಮುದ್ರ ಕೊರೆತವನ್ನು ಮಂತ್ರಿಗಳಾದ ತಾವು ನೋಡಬೇಕಾದ ಪರಿಸ್ಥಿತಿ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಮುದ್ರ ಕೊರೆತ ಹೆಚ್ಚಾಗುತ್ತಿರುವುದರಿಂದ, ಈ ಸಮುದ್ರ ಕೊರೆತವನ್ನು ತಾವು ನೋಡುವುದಕ್ಕೆ ಬಂದಾಗ, ಜನರಿಗೆ ವಿಶ್ವಾಸವನ್ನು ಮೂಡಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ..—ನಾವು ೧೦ ಲಕ್ಷವನ್ನು ಮೂರು ವರ್ಷದಲ್ಲಿ ಖರ್ಚು ಮಾಡುತ್ತೇವೆಂದು ನಾನು ಹೇಳಿಲ್ಲ. ಆಡಳಿತಾತ್ಮಕ ಮಂಜೂರಾತಿ ಆಗಬೇಕಾದರೆ, ಕನಿಷ್ಟ ಪಕ್ಷ ಆಯವ್ಯಯದಲ್ಲಿ ಮೂರನೆಯ ಒಂದು ಭಾಗ ಹಣವನ್ನು ಇಟ್ಟರೆ ಮಾತ್ರ ಮಂಜೂರಾತಿ ಸಿಗುತ್ತದೆ ಎಂಬುದನ್ನು ಮನಗಂಡು ಈ ಮಾತನ್ನು ನಾನು ಹೇಳಿದ್ದೇನೆ. ಈ ವರ್ಷವೇ ಆ ಕೆಲಸವನ್ನು ಪೂರ್ತಿ ಮಾಡುವುದಕ್ಕೆ ನಮ್ಮ ಸರ್ಕಾರ ಪ್ರಯತ್ನ ಮಾಡುತ್ತದೆ. ಕರ್ನಾಟಕದಲ್ಲಿ ಮುನ್ನೂರು ಕಿಲೋಮೀಟರ್ ಈ ಕರಾವಳಿ ತೀರ ಇದೆ ಸಮುದ್ರ ಕೊರೆತದಿಂದ ಪ್ರತಿವರ್ಷ ಸಹಸ್ರಾರು ಮನೆಗಳು ಜನ ಮಂತು ಆಸ್ತಿಗೆ ಹಾನಿಯಾಗುತ್ತಿರುವುದು ಸರ್ಕಾರಕ್ಕೆ ಗೊತ್ತಾಗಿವೆ. ಸ್ವಾತಂತ್ರ್ಯ ಬಂದಂದಿನಿಂದ ಇವತ್ತಿನವರೆಗೆ ಕರ್ನಾಟಕ ಸರ್ಕಾರ ಖರ್ಚು ಮಾಡಿರುವುದು ಸುಮಾರು ನಾಲ್ಕೂವರೆ ಐದು ಕೋಟಿ ರೂಪಾಯಿ. ಕೇಂದ್ರ ಸರ್ಕಾರದ ಅನುದಾನ ಇದುವರೆಗೆ ಬರಲಿಲ್ಲ. ಇದರ ಬಗ್ಗೆ ಸಮಗ್ರವಾದ ಯೋಜನೆಯನ್ನು ತಯಾರು ಮಾಡಿ, ಕಳೆದ ನಾಲ್ಕಾರು ವರ್ಷಗಳಿಂದ ಅಂದಾಜನ್ನು ಬೇಡಿಕೆಯಾಗಿ, ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದರೂ ಅದು ಇದುವರೆಗೂ ಮಂಜೂರು ಆಗಲಿಲ್ಲ. ೧೪೫ ಕೋಟಿ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ. ಮಂಜೂರಾತಿಯಾಗಿ ಬರಲಿಲ್ಲ. ಮೊನ್ನೆ ಇದರ ಬಗ್ಗೆ ಹೆಚ್ಚು ಒತ್ತಡ ತಂದಾಗ, ಇದನ್ನು ಸಿಂಕ್ರೊನೈಸ್ ಮಾಡಿ, ಎಲ್ಲಿ ಇದರ ಅಗತ್ಯವಿದೆ ಅಷ್ಟಕ್ಕಾದರೂ ಮಾಡಿಕೊಡಿ ಎಂದು ಕೇಂದ್ರದವರು ಹೇಳಿದಾಗ, ಸುಮಾರು ೪೫ ಕೋಟಿ ರೂಪಾಯಿಗಳ ಅಂದಾಜನ್ನು ನಾವು ತಯಾರು ಮಾಡಿ ಕಳುಹಿಸಿದ್ದೇವೆ.

೧೧-೩೦ ಎ. ಎಂ.

ಆದರಲ್ಲಿ ಸನ್ಮಾನ್ಯ ಸದಸ್ಯರು ಹೇಳಿದಂಥ ಪ್ರದೇಶಗಳೂ ಒಳಗೊಂಡಿದೆ ಎಂದು ಕೇಳಿದ್ದೇನೆ. ಕೇಂದ್ರ ಸರ್ಕಾರದವರು ಹಣವನ್ನು ಕೊಡುತ್ತಾರೆ ಎಂಬು ನಿರೀಕ್ಷೆಯಲ್ಲಿದ್ದೇನೆ. ಅವರು ಹಣ ಕೊಟ್ಟರೆ ಶಾಶ್ವತವಾದ ಕೆಲಸವನ್ನು ಮಾಡಲು ಅವಕಾಶವಾಗುತ್ತದೆ. ಕೇರಳ ರಾಜ್ಯಕ್ಕೆ ಇದಕ್ಕಾಗಿ ಸಾಕಷ್ಟು ಅನುದಾನವನ್ನು ಕೇಂದ್ರ ಸರಕಾರದವರು ಕೊಟ್ಟಿದ್ದಾರೆ. ನಾನೂ ಮೊನ್ನೆ ಹೋಗಿ ನೋಡಿಕೊಂಡು ಬಂದಿದ್ದೇನೆ. ೧೨೫ ಕೋಟಿ ರೂಪಾಯಿಗಳ ಅನುದಾನ ಕೊಟ್ಟು ಅಲ್ಲಿ ಸುಮಾರು ೨೭೦ ರಿಂದ ೩೦೦ ಕಿಲೋಮೀಟರ್ ಉದ್ದದವರೆಗೆ ಶಾಶ್ವತವಾದ ಕೆಲಸ ಮಾಡಿದ್ದಾರೆ. ಅದೇ ರೀತಿ ನಮ್ಮ ಕರ್ನಾಟಕದಲ್ಲೂ ಆಗಬೇಕೆಂಬುದು ನಮ್ಮ ಜನತೆಯ ಒತ್ತಾಸೆ ಮತ್ತು ಸರಕಾರದ ಬಯಕೆ ಕೂಡಾ ಆಗಿದೆ. ಆದರೆ ಕೇಂದ್ರ ಸರಕಾರದ ನೆರವು ಇದಕ್ಕೆ ಬಾರದಿದ್ದರೆ ನಮ್ಮ ಸಂಪನ್ಮೂಲದಿಂದ ಇಷ್ಟು ಭಾರೀ ಮೊತ್ತವನ್ನು ಒದಗಿಸುವುದು ಕಷ್ಟವಾಗುತ್ತದೆ. ಈ ದಿಸೆಯಲ್ಲಿ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡುವುದರ ಮೂಲಕ ಈ ಕೆಲಸವನ್ನು ನಾವು ಶಾಶ್ವತವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.